# UNIVERSITY OF MYSORE
# NATIONAL SERVICE SCHEME
## NEWS LETTER

# ಸಮರ್ಪಣ್
## SAMARPAN

January 2017 to March 2018 | Vol. No: 5, Issue No: 1 & 2



Chief Patron:
**Prof. G. Hemantha Kumar**
Hon'ble Vice- Chancellor

**Patron:**
**Prof. R. Shivappa**
Registrar

**Chief Editor:**
**Dr. B. Chandrashekara**
Programme Co-ordinator NSS

**Editors:**
**Dr. B. P. Ashakumari**
**Mr. Abhishek H. E**

**Members:**
Mr. Santhosh Kumar
Mr. Siddappa
Mr. Shiva Prasad



**Office of the Programme Co-ordinator**
National Service Scheme
University of Mysore, Mysuru

NSS Bhavan, Sahukar Chennaiah Road
Saraswatipuram, Mysuru 570009

Ph.: 0821 2419326
Email: nssuommysuru@gmail.com
www.uni-mysuru.ac.in/NSS


**“ನನಗಲ್ಲ ನಿಮಗೆ”**

**“NOT ME BUT YOU”**

## FOREWORD



### ಸಂದೇಶ

2017–18ನೇ ಸಾಲಿನ ‘ಸಮರ್ಪಣ್’ ಸಂಚಿಕೆಯನ್ನು ಹೊರ ತರುತ್ತಿರುವುದು ಸಂತೋಷದ ಸಂಗತಿ. ಗಾಂಧೀಜಿಯವರ ‘ಗ್ರಾಮ ಸ್ವರಾಜ್ಯ’ದ ಕಲ್ಪನೆ ಸಾಕಾರಗೊಳ್ಳಲು ರಾ.ಸೇ. ಯೋಜನೆ ಸಹಕಾರಿ. ವಿದ್ಯಾರ್ಥಿಗಳಲ್ಲಿ ಶಿಸ್ತು–ಸಹನೆ–ಸಂಯಮಗಳನ್ನು ಮೈಗೂಡಿಸಿ ಬೆಳೆಸಿಕೊಳ್ಳಲು ಇದೊಂದು ಸದಾವಕಾಶ. ಯುವಜನತೆಯಲ್ಲಿ ಏನಾದರೊಂದು ಸಾಧನೆ ಮಾಡಬೇಕೆಂಬ ಹಂಬಲ ಇರುವಾಗ ಅದನ್ನು ಸರಿದಾರಿಗೆ ತರಲು ಇದೊಂದು ಸುಸಂದರ್ಭ. ಎಲ್ಲರೊಡನೆ ಬೆರೆತು ಸಹಬಾಳ್ವೆ ಮಾಡಲು ರಾ.ಸೇ. ಯೋಜನೆಯು ಅವಕಾಶವನ್ನು ಕಲ್ಪಿಸುತ್ತದೆ. ಯಾವುದೇ ಸೌಕರ್ಯವಿಲ್ಲದೇ ಬದುಕನ್ನು ಎದುರಿಸುವ ಸ್ಥೈರ್ಯವನ್ನು ಕಲಿಸುತ್ತದೆ. ಇಂತಹ ಉತ್ತಮವಾದ ಅನೇಕ ಬೆಳವಣಿಗೆಗಳಿಗೆ ಪೂರಕವಾದ ವಾತಾವರಣವನ್ನು ನೀಡುವುದರ ಜೊತೆಗೆ ವಿದ್ಯಾರ್ಥಿಗಳ ಸರ್ವತೋಮುಖ ಅಭಿವೃದ್ಧಿಗೂ ಸಹಾಯಕವಾದ ಎನ್.ಎಸ್.ಎಸ್. ಇನ್ನೂ ಎತ್ತರಕ್ಕೆ ಏರಲಿ ಎಂದು ಹಾರೈಸುತ್ತೇನೆ

**ಪ್ರೊ. ಹೇಮಂತ ಕುಮಾರ್. ಜಿ**
**ಮಾನ್ಯ ಕುಲಪತಿಗಳು**





## ಸಂದೇಶ

ನಿಸ್ವಾರ್ಥದ ಮನೋಭೂಮಿಕೆಗೆ ಎನ್.ಎಸ್.ಎಸ್. ಒಂದು ಪ್ರಯೋಜನಕಾರಿ ಘಟಕ. ಯುವ ಶಕ್ತಿಯನ್ನು ಸಮಾಜಸೇವೆಯಲ್ಲಿ ತೊಡಗಿಸಿಕೊಳ್ಳಲು ಪ್ರೇರೇಪಿಸುವ ಕಾರ್ಯಕ್ರಮಗಳನ್ನು ಎನ್.ಎಸ್.ಎಸ್. ಘಟಕಗಳು ಮಾಡುತ್ತವೆ. ವಿದ್ಯಾರ್ಥಿಗಳನ್ನು ಒಗ್ಗೂಡಿಸುವ, ಗ್ರಾಮ ಜೀವನದತ್ತ ಸೆಳೆಯುವ, ಹಳ್ಳಿಗಳ ಸಮಸ್ಯೆಗಳನ್ನು ಅರಿತುಕೊಳ್ಳುವ ಮತ್ತು ಸಹಾಯ ಮಾಡುವ ಪ್ರಜ್ಞೆಯನ್ನು ಎನ್.ಎಸ್.ಎಸ್. ಮಾಡುತ್ತದೆ. ಈ ನಿಟ್ಟಿನಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಎನ್.ಎಸ್.ಎಸ್. ಕೇಂದ್ರವು ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಅದನ್ನು ಯಶಸ್ವಿಯಾಗಿ ನಡೆಸುತ್ತಾ ಬಂದಿರುವುದು ಸಂತೋಷದ ಸಂಗತಿ. ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಸನಕ್ಕೆ ಎನ್.ಎಸ್.ಎಸ್. ಸಹಕಾರಿ. ಸರಳ ಜೀವನ, ಬದುಕನ್ನು ಹಸನಾಗಿಸುವುದು ಭೇಧಭಾವವಿಲ್ಲದೇ ಇರುವುದು, ಒಟ್ಟಾಗಿ ದುಡಿಯುವುದು ಇದೆಲ್ಲವನ್ನು ಮೈಗೂಡಿಸಿಕೊಳ್ಳಲು ಎನ್.ಎಸ್.ಎಸ್ ಒಂದು ವೇದಿಕೆಯೆಂದರೆ ತಪ್ಪಾಗಲಾರದು. ಈ ನಿಟ್ಟಿನಲ್ಲಿ ನಮ್ಮ ಮೈಸೂರು ವಿಶ್ವವಿದ್ಯಾನಿಲಯದ ಘಟಕವು ಕಾರ್ಯೋನ್ಮುಕವಾಗಿ ಶ್ರಮಿಸುತ್ತಿದೆ. ಇದು ಹೆಚ್ಚು ಯಶಸ್ಸನ್ನು ಕಾಣಲಿಯೆಂದು ಹಾರೈಸುತ್ತೇನೆ.

**ಪ್ರೊ. ಆರ್. ಶಿವಪ್ಪ**
**ಕುಲಸಚಿವರು**
**ಮೈಸೂರು ವಿಶ್ವವಿದ್ಯಾನಿಲಯ**

## ಸಂದೇಶ

ರಾಷ್ಟ್ರೀಯ ಸೇವಾ ಯೋಜನೆ, ಮೈಸೂರು ವಿಶ್ವವಿದ್ಯಾನಿಲಯವು ಪ್ರತಿ ವರ್ಷವೂ 'ಸಮರ್ಪಣ್' ಎಂಬ ಹೆಸರಿನಿಂದ ವಾರ್ಷಿಕ ಸಂಚಿಕೆಯನ್ನು ಹೊರ ತರುತ್ತಿದ್ದು 2017 ಮತ್ತು 2018 ನೇ ಸಾಲಿನ ಎನ್,ಎಸ್,ಎಸ್,ನ ಚಟುವಟಿಕೆಗಳನ್ನು ದಾಖಲಿಸುವ ನಿಟ್ಟಿನಲ್ಲಿ ಈ ಬಾರಿಯೂ ಹೊರ ತರಲಾಗುತ್ತಿದೆ. ಮೈಸೂರು ವಿಶ್ವವಿದ್ಯಾನಿಲಯವು ರಾಜ್ಯದಲ್ಲೇ ಮೊಟ್ಟಮೊದಲು ಎನ್,ಎಸ್,ಎಸ್ ಯೋಜನೆಯನ್ನು ಅಳವಡಿಸಿಕೊಂಡು ಉತ್ತಮ ಕಾರ್ಯಕ್ರಮಗಳು ಮತ್ತು ಕಾರ್ಯಕ್ರಮಾಧಿಕಾರಿಗಳ ಸೇವಾ ಮನೋಭಾವದ ಮೂಲಕ ಕಳೆದ ನಾಲ್ಕು ದಶಕಗಳಿಂದ ಅತ್ಯುತ್ತಮ ಸಾಧನೆಯನ್ನು ಮಾಡಿದೆ. ಕಳೆದ 2015–16 ನೇ ಸಾಲಿನಲ್ಲಿ ರಾಷ್ಟ್ರ ಮತ್ತು ರಾಜ್ಯ ಪ್ರಶಸ್ತಿಗಳೆರಡನ್ನೂ ತನ್ನದಾಗಿಸಿಕೊಂಡು ವಿಶ್ವವಿದ್ಯಾನಿಲಯದ ಶತಮಾನೋತ್ಸವಕ್ಕೆ ಈ ಪ್ರಶಸ್ತಿಗಳನ್ನು ತನ್ನ ಕೊಡುಗೆಯಾಗಿ ಸಲ್ಲಿಸಿದೆ. ವಿಶ್ವವಿದ್ಯಾನಿಲಯದಲ್ಲಿ ಸುಮಾರು 140 ಕಾಲೇಜುಗಳ 20,000 ವಿದ್ಯಾರ್ಥಿಗಳು ಎನ್,ಎಸ್,ಎಸ್,ನಲ್ಲಿ ನೊಂದಾಯಿಸಿಕೊಂಡಿದ್ದು, ಈ ಯೋಜನೆಯ ಮೂಲಕ ವಿದ್ಯಾರ್ಥಿಗಳು ತಮ್ಮ ಪದವಿ ಶಿಕ್ಷಣದ ಜೊತೆ ಜೊತೆಯಲ್ಲೇ ಸಮಾಜ ಸೇವೆಯ ಅನುಭವವನ್ನು ಪಡೆಯುತ್ತಾರೆ. ಆ ಮೂಲಕ ಸಮಾಜದ ಪ್ರತಿನಿಧಿಯಾಗಿ ವಿದ್ಯಾರ್ಥಿಗಳು ತಮ್ಮ ಜವಾಬ್ದಾರಿಯನ್ನು ಅರಿತು ಕೊಳ್ಳುತ್ತಾರೆ. ವಿದ್ಯಾರ್ಥಿಗಳು ಪಠ್ಯದ ಜೊತೆಗೆ ಸಮಾಜ ಸೇವೆಯನ್ನು ಮಾಡುವ ಮೂಲಕ ಈ ರಾಷ್ಟ್ರದ ಪ್ರಜ್ಞಾವಂತ ನಾಗರೀಕರಾಗಿ ಅಭಿವೃದ್ಧಿಗೊಳ್ಳಲು ಸಹಕಾರಿಯಾಗುತ್ತದೆ ಹಾಗೂ ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಸನಕ್ಕೆ ಪೂರಕವಾಗುತ್ತವೆ. ನಮ್ಮ ಈ ಎಲ್ಲಾ ಸಾಧನೆಗಳ ಹಿಂದೆ ನಮ್ಮ ವಿಶ್ವವಿದ್ಯಾನಿಲಯದ ಸಾರಥ್ಯವನ್ನು ವಹಿಸಿರುವ ಕುಲಪತಿ, ಕುಲಸಚಿವರು ಹಾಗೂ ಹಣಕಾಸು ಅಧಿಕಾರಿಗಳ ಸಹಕಾರ, ಸಲಹೆ ಮತ್ತು ಮಾರ್ಗದರ್ಶನವನ್ನು ಸಂಯೋಜನಾಧಿಕಾರಿಯಾಗಿ ಕೃತಜ್ಞತೆಯಿಂದ ಸ್ಮರಿಸಿಕೊಳ್ಳುತ್ತೇನೆ.

**ಡಾ. ಬಿ. ಚಂದ್ರಶೇಖರ**
**ರಾ.ಸೇ.ಯೋ ಕಾರ್ಯಕ್ರಮ ಸಂಯೋಜನಾಧಿಕಾರಿ**

# University Level Activities

## I. Inter Collegiate Camp - ಅಂತರ ಕಾಲೇಜು ನಾಯಕತ್ವ ತರಬೇತಿ ಮತ್ತು ಆಯ್ಕೆ ಶಿಬಿರ 2017



Prof. G.B. Shivaraju addressing the gathering of 41st ICC



Cultural activity from participents in 41st ICC

The 41st Inter Collegiate Camp was organized by the NSS wing of University of Mysore in association with Bharathi College, Bharathinagar, Mandya district from 24-9-2017 to 30-9-2017 at Sri. Athmalingeshwara kshetra, Hanumatha nagara, Maddur taluk, Mandya District. More than 370 NSS volunteers and 20 NSS Programme Officers participated in the Camp. On account of Shramadan the streets of Hanumanthanagar were cleaned and through this act an attempt has been made to bring cleanliness awareness among the local people. Around Athmalingeshwara Temple Shramadhan has been made by the volunteers and removed the weeds in the temple premises. Several lecture Programmes like women empowerment, Environmental conservation, National Integration, Youth Empowerment, Youth and Community Development etc. were organized. To provide an opportunity to the volunteers to exhibit their talent, several competitions were organized, like Group songs, Debate Competition, pick and act, quiz competition, folksongs, patriotic songs, folk dance etc. In order to remember the sacrifice of freedom fighters, film show on the life and works of Mahatma Gandhi was shown. Janapada Rasamanjari, awareness rally were also conducted.

ದಿನಾಂಕ: 24–09–2017 ರಿಂದ 30–09–2017 ವರೆಗೆ ರಾಷ್ಟ್ರೀಯ ಸೇವಾ ಯೋಜನೆ ಮತ್ತು ಭಾರತೀ ಕಾಲೇಜು, ಭಾರತಿನಗರ (ಕೆ.ಎಂ.ದೊಡ್ಡಿ) ಇವರ ಸಹಯೋಗದೊಂದಿಗೆ 41ನೇ ಅಂತರ ಕಾಲೇಜು ವಾರ್ಷಿಕ ಶಿಬಿರವನ್ನು ಶ್ರೀ ಆತ್ಮಲಿಂಗೇಶ್ವರ ಕ್ಷೇತ್ರ, ಹನುಮಂತನಗರ, ಮದ್ದೂರು (ತಾ) ಮಂಡ್ಯ ಜಿಲ್ಲೆಯಲ್ಲಿ ಆಯೋಜಿಸಿದ್ದು ಪ್ರತಿ ರಾಷ್ಟ್ರೀಯ ಸೇವಾ ಯೋಜನೆ ಘಟಕಗಳಿಂದ 02 ಮಂದಿ (01+01) ಸ್ವಯಂ ಸೇವಕರುಗಳಂತೆ (ಒಟ್ಟು 370 ಮಂದಿ) ಹಾಗೂ 20 ಮಂದಿ ಕಾರ್ಯಕ್ರಮಾಧಿಕಾರಿಗಳು ಭಾಗವಹಿಸಿದ್ದರು. ಈ ಶಿಬಿರದಲ್ಲಿ ಉಪನ್ಯಾಸ ಕಾರ್ಯಕ್ರಮ, ರಸ್ತೆಗಳನ್ನು ಸ್ವಚ್ಛಗೊಳಿಸುವುದು, **"ಸಮಾಜ ಅಂದು–ಇಂದು"** ಎಂಬ ವಿಷಯದ ಬಗ್ಗೆ ಸಂವಾದ, **'ಮಹಿಳಾ ಸಬಲೀಕರಣ ಮತ್ತು ಯುವಜನತೆ'** ಎಂಬ ವಿಷಯಗಳನ್ನು ಕುರಿತು ಉಪನ್ಯಾಸ ಏರ್ಪಡಿಸಲಾಗಿತ್ತು. ರಾಷ್ಟ್ರೀಯ ಸೇವಾ ಯೋಜನೆ ಗೀತೆ, ಸಮೂಹಗಾಯನ ಸ್ಪರ್ಧೆ, ಚರ್ಚಾ ಸ್ಪರ್ಧೆ, ಆಶುಭಾಷಣ ಸ್ಪರ್ಧೆ, ರಸ ಪ್ರಶ್ನೆ ಕಾರ್ಯಕ್ರಮ, ಜನಪದ ಗೀತೆ, ದೇಶಭಕ್ತಿ ಗೀತೆ, ಜಾನಪದ ನೃತ್ಯ, ಗಾದೆ ಸ್ಪರ್ಧೆ, ಭಾವಗೀತೆ–ಹೀಗೆ ಹಲವಾರು ಸ್ಪರ್ಧೆಗಳನ್ನು ಆಯೋಜಿಸಲಾಗಿತ್ತು, ಗಾಂಧಿ ಜೀವನ ಕುರಿತ ಸಾಕ್ಷ್ಯಚಿತ್ರ ಪ್ರದರ್ಶನ, "ಜನಪದ ರಸಮಂಜರಿ ಕಾರ್ಯಕ್ರಮ, ಸ್ವಚ್ಛತೆ ಕುರಿತು ಜಾಥ ಕಾರ್ಯಕ್ರಮ, ಕಿರು ನಾಟಕಗಳು ಮುಂತಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು.

## II. District Level Camps-2017, ಜಿಲ್ಲಾ ಮಟ್ಟದ ಶಿಬಿರಗಳು-2017:

2017–18 ನೇ ಸಾಲಿನಲ್ಲಿ ಮೈಸೂರು ಎನ್.ಎಸ್.ಎಸ್. ಘಟಕವು ಮೂರು ಜಿಲ್ಲಾಮಟ್ಟದ ಶಿಬಿರಗಳನ್ನು ವಿವಿಧ ಕಾಲೇಜುಗಳ ಸಹಯೋಗದೊಂದಿಗೆ ಹಮ್ಮಿಕೊಳ್ಳಲಾಗಿತ್ತು.



Mandya DLC Inauguration



Participation of localities in Mandya DLC Camp

### a) Mandya District Level Camp - ಮಂಡ್ಯ ಜಿಲ್ಲಾ ಮಟ್ಟದ ಶಿಬಿರ

P.E.S.Science, Arts and Commerce College, Mandya has organized District Level Camp at **Chandagalu** village, Mandya, taluk, Mandya District.1-10-2017 to 7-10-2017 Totally 206 (105male and 95 female) NSS volunteers and 06 NSS Officers participated in the Camp. During the camp, cleaning of roads, Schools and temple premises, construction of roads, sports activities, health checkup camps, free eye camp, cleanliness awareness, legal awareness, Sports Activities, Veterinary Health checkup were conducted and many resource persons were invited to deliver special lecture on various issues in the camp for the benefit of volunteers and villagers.

ದಿನಾಂಕ: 01–10–2017 ರಿಂದ 7–10–2017 ವರೆಗೆ ಮಂಡ್ಯ ಜಿಲ್ಲೆಯ ಜಿಲ್ಲಾ ಮಟ್ಟದ ಶಿಬಿರವನ್ನು ಪಿ.ಇ.ಎಸ್. ವಿಜ್ಞಾನ ಕಲಾ ಮತ್ತು ವಾಣಿಜ್ಯ ಕಾಲೇಜು, ಮಂಡ್ಯ ಇವರ ಸಹಯೋಗದೊಂದಿಗೆ ಚಂದಗಾಲು ಗ್ರಾಮ, ಮಂಡ್ಯ ಜಿಲ್ಲೆಯಲ್ಲಿ ನಡೆಸಲಾಯಿತು. ಒಟ್ಟು 206 (105 ಸ್ವಯಂ ಸೇವಕ ಹಾಗೂ 95 ಸ್ವಯಂ ಸೇವಕಿಯರು) ರಾಷ್ಟ್ರೀಯ ಸೇವಾ ಯೋಜನೆ ಸ್ವಯಂಸೇವಕರು ಹಾಗೂ 06 ಮಂದಿ ರಾ.ಸೇ.ಯೋ. ಅಧಿಕಾರಿಗಳು ಭಾಗವಹಿಸಿದ್ದರು. ಈ ಶಿಬಿರದಲ್ಲಿ ರಸ್ತೆಗಳ ಸ್ವಚ್ಛತೆ, ಶಾಲಾ ಮತ್ತು ದೇವಾಲಯಗಳ ಆವರಣಗಳ ಸ್ವಚ್ಛತೆ, ರಸ್ತೆ ನಿರ್ಮಾಣ, ಆರೋಗ್ಯ ತಪಾಸಣೆ, ಉಚಿತ ಚರ್ಮರೋಗ ತಪಾಸಣಾ ಶಿಬಿರ, ಜಾನುವಾರುಗಳಿಗೆ ಉಚಿತ ಆರೋಗ್ಯ ತಪಾಸಣಾ ಶಿಬಿರ, ಶುಚಿತ್ವ ಮತ್ತು ಆರೋಗ್ಯ ಬಗೆಗಿನ ಕಾರ್ಯಕ್ರಮ, ಕ್ರೀಡಾ ಚಟುವಟಿಗೆಗಳು, ಸಾಮಾಜಿಕ ಸಮಸ್ಯೆಗಳ ಕುರಿತು ಜಾಥಾ, ಜೈವಿಕ ಇಂಧನದ ಜಾಗೃತಿ ಮತ್ತು ವ್ಯಾಜ್ಯ ಮುಕ್ತ ಗ್ರಾಮಕ್ಕಾಗಿ ಕಾನೂನಿನ ಅರಿವು–ನೆರವು ಕಾರ್ಯಕ್ರಮ ಹಾಗೂ ಇನ್ನಿತರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ಹಲವಾರು ಸಂಪನ್ಮೂಲ ವ್ಯಕ್ತಿಗಳನ್ನು ಆಹ್ವಾನಿಸಿ ಶಿಬಿರಾರ್ಥಿಗಳಿಗೆ ಹಾಗೂ ಗ್ರಾಮಸ್ಥರಿಗೆ ವಿಶೇಷ ಉಪನ್ಯಾಸ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು.

### b) Mysuru District Level Camp - ಮೈಸೂರು ಜಿಲ್ಲಾ ಮಟ್ಟದ ಶಿಬಿರ

Govt Women's First Grade College, Hunsur, Mysuru District, has organized District Level Camp at **Hanagodu** Village, Hunsur taluk, from 8th October to 14th October 2017. Totally 239 (136male and 103 female) NSS volunteers and 10 NSS Officers participated in the Camp. During the camp cleaning of roads, clearing the debris from the village drains, H.I.V and AIDS Awareness, Child and Women's health and hygiene awareness Programmes, cleaning of temple premises, construction of toilet pits and Cleanliness awareness, conservation of water and forest Programmes were organized. Repair of Roads, health checkup camp cultural and Sports Activities, veterinary health check up camp was also conducted . Many resource persons were invited to the camp for the benefit of volunteers and villagers of the camp.



Volunteer at Mysuru DLC



ಗ್ರಾಮ ಸ್ವಚ್ಛಗೊಳಿಸಿದ ಎನ್ನೆಸ್ಸೆಸ್ ವಿದ್ಯಾರ್ಥಿಗಳು

ಹುಣಸೂರು ತಾಲೂಕಿನ ಹನಗೋಡಿನಲ್ಲಿ ಮೈಸೂರು ವಿವಿಯ ಅಂತರ ಜಿಲ್ಲಾ ಮಟ್ಟದ ರಾಷ್ಟ್ರೀಯ ಸೇವಾ ಯೋಜನೆ

News clipings of Mysuru DLC

ದಿನಾಂಕ: 08–10–2017 ರಿಂದ 14–10–2017 ವರೆಗೆ ಮೈಸೂರು ಜಿಲ್ಲೆಯ ಜಿಲ್ಲಾ ಮಟ್ಟದ ಶಿಬಿರವು ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು, ಹುಣಸೂರು, ಮೈಸೂರು ಜಿಲ್ಲೆ ಇವರ ಸಹಯೋಗದಲ್ಲಿ ಹನಗೋಡು ಗ್ರಾಮ, ಹುಣಸೂರು ತಾಲ್ಲೂಕು, ಮೈಸೂರು ಜಿಲ್ಲೆಯಲ್ಲಿ ನಡೆಸಲಾಯಿತು. ಒಟ್ಟು 239 (136 ಸ್ವಯಂ ಸೇವಕ ಹಾಗೂ 103 ಸ್ವಯಂ ಸೇವಕಿಯರು) ರಾಸೇಯೋ ಸ್ವಯಂ ಸೇವಕರು ಹಾಗೂ 10 ಮಂದಿ ರಾಸೇಯೋ ಅಧಿಕಾರಿಗಳು ಭಾಗವಹಿಸಿದ್ದರು. ಶಿಬಿರದಲ್ಲಿ ಪರಿಸರ ಸಂರಕ್ಷಣೆ, ಹೆಚ್.ಐ.ವಿ/ಏಡ್ಸ್ ಬಗ್ಗೆ ಜಾಥಾ ಮೂಲಕ ಜಾಗೃತಿ, ಮಹಿಳಾ ಮತ್ತು ಮಕ್ಕಳ ಹಕ್ಕುಗಳ ಬಗ್ಗೆ ಉಪನ್ಯಾಸ, ಶೌಚಾಲಯಗಳ ಬಗ್ಗೆ ಜಾಗೃತಿ, ಅರಣ್ಯ ಮತ್ತು ವನ್ಯಜೀವಿ ಸಂರಕ್ಷಣೆ ಕುರಿತು ಜಾಗೃತಿ, ಸುಧಾರಿತ ಕೃಷಿ ಮತ್ತು ಸಾವಯವ ಗೊಬ್ಬರ ಬಳಕೆ ಬಗ್ಗೆ ತಿಳುವಳಿಕೆ ನೀಡಲಾಯಿತು, ಜಾಗತಿಕ ತಾಪಮಾನದ ಬಗ್ಗೆ ಅರಿವು ಮತ್ತು ಸಾಂಸ್ಕೃತಿಕ ಹಾಗೂ ಕ್ರೀಡಾ ಚಟುವಟಿಕೆಗಳನ್ನು ಏರ್ಪಡಿಸಲಾಗಿತ್ತು, ಗ್ರಾಮದ ಸ್ವಚ್ಛತೆ ಮತ್ತು ರಸ್ತೆ ರಿಪೇರಿ, ಸಸಿಗಳನ್ನು ನೆಡುವ ಕಾರ್ಯಕ್ರಮ, ಗ್ರಾಮದ ಬೀದಿಗಳು ಇತರೆ ಸಾರ್ವಜನಿಕ ಸ್ಥಳಗಳ ಸ್ವಚ್ಛತಾ ಕಾರ್ಯಕ್ರಮ, ಶೌಚಾಲಯ ಗುಂಡಿಗಳನ್ನು ತೆಗೆಯಲಾಯಿತು, ಅರಿವು ಗೀತೆಗಳು, ಜಾನುವಾರುಗಳ ತಪಾಸಣೆ, ವಿಶೇಷ ಉಪನ್ಯಾಸ ಕಾರ್ಯಕ್ರಮ, ಮಳೆ ನೀರಿನ ಸಂರಕ್ಷಣೆ, ಸಾಂಕ್ರಾಮಿಕ ರೋಗಗಳು ಹರಡದಂತೆ ಅರಿವು ಕಾರ್ಯಕ್ರಮ, ಸಾಂಸ್ಕೃತಿಕ ಕಾರ್ಯಕ್ರಮಗಳು ಮತ್ತು ಸ್ಪರ್ಧೆಗಳು, ತ್ಯಾಜ್ಯ ನಿರ್ವಹಣೆ, ಆರೋಗ್ಯ ತಪಾಸಣಾ ಶಿಬಿರ ಇತ್ಯಾದಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು.

## c) Hassan District level Camp - ಹಾಸನ ಜಿಲ್ಲಾ ಮಟ್ಟದ ಶಿಬಿರ:



Inauguration of Hassan DLC



Volunteers decorated the flag post

Govt. Arts College, has (Autonomous), Hassan organized District Level Camp at Anachihalli Village, Hassan taluk, Hassan District. Totally 200 (108 male and 84 female) NSS volunteers and 08 NSS Officers participated in the Camp. During the camp cleaning of temple premises, roads, Drainages, School premises, health checkup camp, environment protection, repair of roads, plantation, AIDS Awareness, water conservation, social awareness programme, eradication of plastic, drug abuse, construction of toilets, social awareness through Jatha Programme, veterinary animal checkup, legal awareness, special lecturer Programmes, dental checkup camp, blood grouping and blood donation camp, cultural Programmes etc., were organized. Many resource persons were invited to the camp for delivering special lectures on various topics for the benefit of volunteers and villagers.

**ದಿನಾಂಕ: 06–10–2017 ರಿಂದ 12–10–2017 ವರೆಗೆ ಹಾಸನ ಜಿಲ್ಲೆಯ ಜಿಲ್ಲಾ ಮಟ್ಟದ ಶಿಬಿರವನ್ನು** ಸರ್ಕಾರಿ ಕಲಾ, ವಾಣಿಜ್ಯ ಮತ್ತು ಸ್ನಾತಕೋತ್ತರ ಕಾಲೇಜು(ಸ್ವಾಯತ್ತ) ಹಾಸನ ಇವರು ಅಣಚಿಹಳ್ಳಿ ಗ್ರಾಮ, ಹಾಸನ ತಾಲ್ಲೂಕು ಹಾಸನ ಜಿಲ್ಲೆಯಲ್ಲಿ ನಡೆಸಲಾಯಿತು. ಒಟ್ಟು 200 (108ಸ್ವಯಂ ಸೇವಕ ಹಾಗೂ 84 ಸ್ವಯಂಸೇವಕಿಯರು) ರಾಸೇಯೋ ಸ್ವಯಂ ಸೇವಕರು ಹಾಗೂ 08 ರಾಸೇಯೋ ಅಧಿಕಾರಿಗಳು ಭಾಗವಹಿಸಿದ್ದರು. ಶಿಬಿರದ ಅಂಗವಾಗಿ ಗ್ರಾಮಗಳ ಸ್ವಚ್ಛತೆ, ರಸ್ತೆ ಮತ್ತು ಚರಂಡಿ ದುರಸ್ತಿ ಮತ್ತು ಸ್ವಚ್ಚತೆ ಕಾರ್ಯಕ್ರಮ, ಆಸ್ಪತ್ರೆ ಆವರಣ, ದೇವಸ್ಥಾನ, ಚರಂಡಿ, ಶಾಲಾ ಆವರಣ ಸ್ವಚ್ಚಗೊಳಿಸುವಿಕೆ, ಆರೋಗ್ಯ ತಪಾಸಣಾ ಕಾರ್ಯಕ್ರಮ, ಪರಿಸರ ಸಂರಕ್ಷಣೆ, ನೀರಿನ ಸಂರಕ್ಷಣೆ, ಮತ್ತು ನೀರಿನ ಸದ್ಬಳಕೆ ಮತ್ತು ಸಾಮಾಜಿಕ ಸಮಸ್ಯೆಗಳ ಕುರಿತು ಜಾಗೃತಿ, ಏಡ್ಸ್ ಬಗೆಗಿನ ಅರಿವು, ಮಹಿಳಾ ಕಾರ್ಯಕ್ರಮ, ಸಾಕ್ಷರತಾ ಕಾರ್ಯಕ್ರಮ, ಪ್ಲಾಸ್ಟಿಕ್ ನಿರ್ಮೂಲನೆ, ಮಾದಕ ವ್ಯಸನ ನಿರ್ಮೂಲನೆ ಮತ್ತು ಜಾಗೃತಿ ಮತ್ತು ಕಾನೂನು ಅರಿವು, ವೈಜ್ಞಾನಿಕ ಕೃಷಿ ಬಗ್ಗೆ ಅರಿವು ಮೂಡಿಸುವುದು, ವಿವಿಧ ಸಂಪನ್ಮೂಲ ವ್ಯಕ್ತಿಗಳನ್ನು ಕರೆಯಿಸಿ ವಿದ್ಯಾರ್ಥಿಗಳಿಗೆ ಹಾಗೂ ಗ್ರಾಮಸ್ಥರಿಗೆ ಉಪನ್ಯಾಸ ಕಾರ್ಯಕ್ರಮಗಳು, ಗ್ರಾಮದ ಆರ್ಥಿಕ ಮತ್ತು ಸಾಮಾಜಿಕ ಸಮೀಕ್ಷೆ, ಉಚಿತ ಬರಡು ರಾಸು ತಪಾಸಣೆ, ಉಚಿತ ದಂತ ತಪಾಸಣಾ ಶಿಬಿರ, ಉಚಿತ ರಕ್ತ ಗುಂಪು ಪರೀಕ್ಷೆ ಮತ್ತು ರಕ್ತದಾನ ಶಿಬಿರ ಮುಂತಾದ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿತ್ತು.

ಸಾಹಿತ್ಯಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳ ಅಂಗವಾಗಿ ಚರ್ಚಾ ಸ್ಪರ್ಧೆ, ಆಶುಭಾಷಣ ಸ್ಪರ್ಧೆ, ರಸಪ್ರಶ್ನೆ ಸ್ಪರ್ಧೆ, ದೇಶಭಕ್ತಿಗೀತೆ, ಜನಪದ ಹಾಗೂ ಭಾವಗೀತೆ, ಏಕಪಾತ್ರಾಭಿನಯ, ಜಾಗೃತಿ ಗೀತೆಗಳು ಹಾಗೂ

ನಾಟಕಗಳು ಇತ್ಯಾದಿ ಸ್ಪರ್ಧಾ ಕಾರ್ಯಕ್ರಮಗಳ ಜೊತೆಗೆ ಮನರಂಜನಾ ಕಾರ್ಯಕ್ರಮಗಳನ್ನು ಸಹ ಪ್ರತಿನಿತ್ಯ ಹಮ್ಮಿಕೊಳ್ಳಲಾಗಿತ್ತು.

ಈ ಮೇಲ್ಕಂಡ ಕಾರ್ಯಕ್ರಮಗಳ ಜೊತೆಗೆ ಗ್ರಾಮದ ಆರೋಗ್ಯ ಇಲಾಖೆ ಸಹಕಾರದೊಂದಿಗೆ ರಕ್ತದ ಗುಂಪು ಗುರುತಿಸುವಿಕೆ, ರಕ್ತದಾನ ಶಿಬಿರ, ಕಣ್ಣು ಮತ್ತು ದಂತ ತಪಾಸಣೆ ಶಿಬಿರವನ್ನು ಏರ್ಪಡಿಸಲಾಗಿತ್ತು.

## District Level NSS Camps -2017-18

| SL. NO | Name of the College | Place | Date | Volunteers | | Programme Officer | Total |
|---|---|---|---|---|---|---|---|
| | | | | Male | Female | | |
| 1. | P.E.S.Science, Arts and Commerce College Mandya | Chandagala village, Mandya | 01-10-2017 to 07-10-2017 | 105 | 97 | 06 | 206 |
| 2. | Govt. Women's First Grade College, Hunasur | Hanagodu Village | 08-10-2017 to 14-10-2017 | 136 | 103 | 10 | 239 |
| 3. | Govt Arts College, College Hassan (Autonomous), | Anachihalli Village | 06-10-2017 to 12-10-2017 | 108 | 84 | 08 | 200 |

During the camp 5 important activities have been conducted, they are:

1. Morning Flag hoisting and yoga
2. Shramadan
3. Special lectures on socio-Economic and Environment issues
4. Different competitions and
5. Cultural Programme.

Along with the above Programmes, in collaboration with the health department the Blood Grouping, Blood donation, Eye and dental checkup camps were also conducted during the camp.

## PROGRAMMES CONDUCTED BY THE UNIVERSITY OF MYSORE NSS CEL

### 1. 126th Birth Anniversary of Dr. B.R. Ambedkar - ಚಿಂತನಾ ಸಮಾವೇಶ


ಭಾರತೀಯರಿಗೆ ಅಂಬೇಡ್ಕರ್ ಆದರ್ಶಪ್ರಾ

ಜಾತಿ ಪದ್ಧತಿ ಆಚರಣೆ

ೇಶದ್ರೋಹಕ್ಕೆ ಸಮ'

Paper report

In Collaboration with State NSS cell, youth Empowerment, and Sports Department, Bengaluru, the NSS, University of Mysore has Organized Dr. B.R.Ambedkar's 126thBirth Anniversary on 22-04-2017 at humanities Auditorium, Manasagangothri, University of Mysore, Mysuru. Prof. Ravivarma Kumar, Former Advocate General of Karnataka, was the chief guest.Around 500 NSS Volunteers and 30 Programme Officersof various colleges were present.

ದಿನಾಂಕ: 22–04–2017 ರಂದು ಕರ್ನಾಟಕ ರಾಜ್ಯ ಎನ್.ಎಸ್.ಎಸ್ ಅಧಿಕಾರಿ ಹಾಗೂ ಪದನಿಮಿತ್ತ ಸರ್ಕಾರ ಜಂಟಿ ಕಾರ್ಯದರ್ಶಿ ರಾ.ಸೇ.ಯೋ. ಕೋಶ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಬೆಂಗಳೂರು ಮತ್ತು ರಾಷ್ಟ್ರೀಯ ಸೇವಾ ಯೋಜನೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರ ವತಿಯಿಂದ ಡಾ.ಬಿ.ಆರ್ ಅಂಬೇಡ್ಕರ್ ರವರ 126ನೇ ಜನ್ಮದಿನಾಚರಣೆಯ ಸಂಬಂಧ **"ಚಿಂತನಾ ಸಮಾವೇಶ"**ವನ್ನು ಮಾನವಿಕ ಸಭಾಂಗಣ, ಮಾನಸ ಗಂಗೋತ್ರಿ, ಮೈಸೂರು ಇಲ್ಲಿ ಹಮ್ಮಿಕೊಳ್ಳಲಾಗಿತ್ತು. ಪ್ರತಿ ಎನ್.ಎಸ್.ಎಸ್ ಘಟಕಗಳಿಂದ 10 (05+5) ಮಂದಿ ಸ್ವಯಂ ಸೇವಕರು ಮತ್ತು ಒಬ್ಬರು (01) ಕಾರ್ಯಕ್ರಮಾಧಿಕಾರಿಗಳಂತೆ 500 ವಿದ್ಯಾರ್ಥಿಗಳು ಹಾಗೂ ಕಾರ್ಯಕ್ರಮ ಅಧಿಕಾರಿಗಳು ಭಾಗವಹಿಸಿದ್ದರು. ಮುಖ್ಯ ಭಾಷಣಕಾರರಾಗಿ ಪ್ರೊ. ರವಿವರ್ಮಕುಮಾರ್, ಖ್ಯಾತ ನ್ಯಾಯವಾದಿಗಳು ಭಾಗವಹಿಸಿದ್ದರು.

## 2. State & National Level Award Selection Meeting

The Award proposals of NSS Volunteers and Officers for State & National Level Award, the Selection Meeting was held at Centenary Building, Maharaja's College, Mysuru on 27-05-2017.

ದಿನಾಂಕ: 27–05–2017 ರಂದು 2016–17ನೇ ಸಾಲಿನ ರಾಜ್ಯ ಮತ್ತು ಇಂದಿರಾ ಗಾಂಧಿ ರಾಷ್ಟ್ರೀಯ ಪ್ರಶಸ್ತಿಯ ಪೂರ್ವಭಾವಿ ಆಯ್ಕೆ ಪ್ರಕ್ರಿಯೆಯನ್ನು ಮಹಾರಾಜ ಕಾಲೇಜು, ಶತಮಾನೋತ್ಸವ ಭವನ, ಮೈಸೂರು ಇಲ್ಲಿ ನಡೆಸಲಾಯಿತು.

## 1. One Day Workshop for NSS Programme Officers of Govt. Colleges



Govt. College NSS Programme Officer is one day workshop



Dr. Gananath Shetty Yekkar addressing the NSS PO in one day workshop

The University of Mysore organized one day workshop for NSS officers of Govt. First Grade Colleges of University of Mysore jurisdiction. The NSS officers from Mysuru city and Mysuru, Chamarajanagar, Mandya and Hassan Districts participated.

ದಿನಾಂಕ: 01–06–2017 ರಂದು ಮೈಸೂರು ವಿಶ್ವವಿದ್ಯಾನಿಲಯಕ್ಕೆ ಒಳಪಡುವ ಎಲ್ಲಾ ಸರ್ಕಾರಿ ಕಾಲೇಜುಗಳ ಕಾರ್ಯಕ್ರಮ ಅಧಿಕಾರಿಗಳಿಗೆ ಒಂದು ದಿನದ ಕಾರ್ಯಗಾರವನ್ನು ಎನ್.ಸಿ.ಹೆಚ್.ಎಸ್. ಬಿಲ್ಡಿಂಗ್‌ನಲ್ಲಿ ಹಮ್ಮಿಕೊಂಡಿದ್ದು, ಒಟ್ಟು 50 ಮಂದಿ ಕಾರ್ಯಕ್ರಮಾಧಿಕಾರಿಗಳು ಭಾಗವಹಿಸಿದ್ದರು

## 4. Annual Meeting

On 22-07-2017, one-day workshop for all the Programme officers 2017-18 Annual meeting was organized at NSS Bhavan, Saraswatipuram, Mysuru. 105 Programme officers participated in the Programme.

ದಿನಾಂಕ: 22–07–2017 ರಂದು ರಾಷ್ಟ್ರೀಯ ಸೇವಾ ಯೋಜನೆ ಕಛೇರಿ, ಸರಸ್ವತಿಪುರಂ, ಮೈಸೂರು ಇಲ್ಲಿ ಮೈಸೂರುನಗರ ಮತ್ತು ಗ್ರಾಮಾಂತರ, ಚಾಮರಾಜನಗರ, ಮಂಡ್ಯ, ಹಾಸನ ಜಿಲ್ಲೆಯ ಕಾರ್ಯಕ್ರಮಾಧಿಕಾರಿಗಳಿಗೆ 2017–18 ನೇ ಸಾಲಿನ ವಾರ್ಷಿಕ ಚಟುವಟಿಕೆಗಳ ಕುರಿತು (ಪ್ರಥಮ ವಾರ್ಷಿಕ ಸಭೆ) ಒಂದು ದಿನದ ವಿಶೇಷ ಕಾರ್ಯಗಾರವನ್ನು ಹಮ್ಮಿಕೊಳ್ಳಲಾಯಿತು. ಒಟ್ಟು 105 ಮಂದಿ ಕಾರ್ಯಕ್ರಮಾಧಿಕಾರಿಗಳು ಭಾಗವಹಿಸಿದ್ದರು

## 5. World Environment Day -2017



Hasiru Gangotri-Usiru Gangotri



Plantation of sapling by Prof. Dayanand Mane

The University of Mysore, has organized world Environment day on 05-06-2017 at Manasagangothri, University of Mysore, Mysuru. NSS volunteers, Programme Officers and officers under training in NSS-ETI are participated in the Programme.

ದಿನಾಂಕ: 05–06–2017 ರಂದು ಮಾನಸ ಗಂಗೋತ್ರಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇಲ್ಲಿ ವಿಶ್ವಪರಿಸರ ದಿನಾಚರಣೆಯನ್ನು ಆಚರಿಸಲಾಯಿತು. ಇದರ ಅಂಗವಾಗಿ ವಿದ್ಯಾರ್ಥಿಗಳು, ಕಾರ್ಯಕ್ರಮ ಅಧಿಕಾರಿಗಳು ಹಾಗೂ ಎನ್.ಎಸ್.ಎಸ್–ಇ.ಟಿ.ಐ ತರಬೇತಿಯಲ್ಲಿ ಭಾಗವಹಿಸಿದ್ದ ಕರ್ನಾಟಕ ರಾಜ್ಯದ ಹಲವು ವಿಶ್ವವಿದ್ಯಾನಿಲಯಗಳ ಹಲವು ಕಾರ್ಯಕ್ರಮ ಅಧಿಕಾರಿಗಳು ಮಾನಸ ಗಂಗೋತ್ರಿಯ ಆವರಣದಲ್ಲಿ ವಿಶ್ವವಿದ್ಯಾನಿಲಯದ ತೋಟಗಾರಿಕಾ ವಿಭಾಗದವರ ಸಹಕಾರದಿಂದ ಸುಮಾರು 500 ಗಿಡಗಳನ್ನು ನೆಡುವ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು

## 6. Essay and Film Competition - ಸಂಕಲ್ಪ್ ಸೆ ಸಿದ್ಧಿ (Sankalp se siddhi



Volunteers participated in essay competition



Short Movie making on Swaach Bharath Abhiyan

On 04-09-2017 the University of Mysore, organized Essay and Film Competition for NSS volunteers under **"Sankalpa se Siddi"** Programme in 04 Districts. In Each Competition 03 winners were honored.

ದಿನಾಂಕ : 04–09–217 ರಂದು ಮೈಸೂರು ವಿಶ್ವವಿದ್ಯಾನಿಲಯಕ್ಕೆ ಒಳಪಡುವ ನಾಲ್ಕು ಜಿಲ್ಲೆಗಳಲ್ಲಿ 2022 ರೊಳಗೆ ಭಾರತವನ್ನು ಸ್ವಚ್ಛ ಭಾರತ ಮಾಡುವ ಉದ್ದೇಶದಿಂದ **"ಸಂಕಲ್ಪ ಸೆ ಸಿದ್ಧಿ" ಕ್ರಾರ್ಯಕ್ರಮ**ದಡಿಯಲ್ಲಿ ಜಿಲ್ಲಾ ಮಟ್ಟದ ಪ್ರಬಂಧ ಮತ್ತು ಕಿರು ಚಿತ್ರ ಸ್ಪರ್ಧೆಗಳನ್ನು ನಡೆಸಿ ಪ್ರತಿ ಸ್ಪರ್ಧೆಗಳಿಂದ 03 ಮಂದಿ ಒಟ್ಟು 12 ಮಂದಿ ಸ್ವಯಂಸೇವಕ/ಸ್ವಯಂಸೇವಕಿಯರನ್ನು ಆಯ್ಕೆಮಾಡಲಾಯಿತು.

## 7. Swachh Bharath Abhiyan

On 14-09-2017 University of Mysore, Mysuru had organized Cleaning Programme Under the **"Swachh Bharath Abhiyan"** at Kuduremala, Mysuru. Totally 150 (Janadeepa and Maharani's Science College Volunteers) Volunteers Participated in the Programme.

ದಿನಾಂಕ: 14–09–2017 ರಂದು ರಾಷ್ಟ್ರೀಯ ಸೇವಾ ಯೋಜನೆ, ಮೈಸೂರು ವಿಶ್ವವಿದ್ಯಾನಿಲಯದ ವತಿಯಿಂದ ಮೈಸೂರು ನಗರದ ಜ್ಞಾನದೀಪ ಪ್ರಥಮ ದರ್ಜೆ ಕಾಲೇಜು ಮತ್ತು ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು, ಮೈಸೂರು,ಈ ಕಾಲೇಜುಗಳ ಸ್ವಯಂಸೇವಕರುಗಳಿಂದ ಕುದುರೆವಾಳದಲ್ಲಿ ಮೈಸೂರು ವಿಶ್ವವಿದ್ಯಾನಿಲಯ **"ಸ್ವಚ್ಛ ಭಾರತ ಅಭಿಯಾನ"**ದ ಅಡಿಯಲ್ಲಿ ಸ್ವಚ್ಛತಾ ಕಾರ್ಯವನ್ನು ಏರ್ಪಡಿಸಲಾಗಿದ್ದು ಒಟ್ಟು 50 ಮಂದಿ ರಾಷ್ಟ್ರೀಯ ಸೇವಾ ಯೋಜನೆಯ ಸ್ವಯಂ ಸೇವಕರುಗಳು ಭಾಗವಹಿಸಿದ್ದರು.

## 8. Republic Day Parade Selection and Training



Volunteer March Fast training by Mr. Lingaraju



RD Parade selection

State & National Level Republic Day Parade Selection and Training of NSS Volunteers was organized at NSS Bhavan, Saraswatipuram, Mysuru on 16-09-2017 More than (150) volunteers participated in the said training Programme. **In the Training 16 (08 Female & 08 Male) NSS Volunteers**

**were Selected for State Level Pre-R.D Camp**

ದಿನಾಂಕ: 16–09–2017 ರಂದು ರಾಷ್ಟ್ರ ಮತ್ತು ರಾಜ್ಯ ಮಟ್ಟದ ಗಣರಾಜೋತ್ಸವ ಪೂರ್ವಪಥಸಂಚಲನ ಆಯ್ಕೆ ಪ್ರಕ್ರಿಯೆಯನ್ನು ರಾಷ್ಟ್ರೀಯ ಸೇವಾ ಯೋಜನೆ ಕಛೇರಿ, ಸರಸ್ವತಿಪುರಂ, ಮೈಸೂರು ಇಲ್ಲಿ ಆಯೋಜಿಸಿದ್ದು, ಒಟ್ಟು 16 ಮಂದಿ ಸ್ವಯಂಸೇವಕರುಗಳನ್ನು (08+08) ವಿಶ್ವವಿದ್ಯಾನಿಲಯದಿಂದ ರಾಜ್ಯ ಮಟ್ಟದ ಶಿಬಿರಕ್ಕೆ ಆಯ್ಕೆಮಾಡಲಾಯಿತು.

## 9. National Unity Day







Sardhar Vallabhai Patel 142nd birth anniversary pics

On account of 142nd Birth Anniversary of Sardar Vallabhbhai Patel National Unity Day was observed in Maharaja's College on 31-10-2017. On this occasion essay and elocution competition were arranged on the topic **"Life, History and Achievements of Sardar Vallabhbhai Patel"** About 18 NSS Volunteers in Essay Competition, and 13 (06 Female/ 07) Volunteers participated in the Programme.

ದಿನಾಂಕ: 31–10–2017 ರಂದು ಸರ್ದಾರ್ ವಲ್ಲಬಾಯ್ ಪಟೇಲ್‌ರವರ 142ನೇ ಜನ್ಮದಿನದ ಪ್ರಯುಕ್ತ (ರಾಷ್ಟ್ರೀಯ ಏಕತಾ ದಿವಸ) ಮೈಸೂರು ವಿಶ್ವವಿದ್ಯಾನಿಲಯಕ್ಕೆ ಒಳಪಡುವ ಕಾಲೇಜುಗಳ ರಾಷ್ಟ್ರೀಯ ಸೇವಾ ಯೋಜನೆಯ ಸ್ವಯಂಸೇವಕ/ ಸ್ವಯಂಸೇವಕಿಯರುಗಳಿಗೆ **"ಸರ್ದಾರ್ ವಲ್ಲಬಾಯ್ ಪಟೇಲ್‌ರವರ ಜೀವನ ಮತ್ತು ಸಾಧನೆ"** ಕುರಿತು ಮಹಾರಾಜ ಕಾಲೇಜು, ಮೈಸೂರು ಇಲ್ಲಿ ಪ್ರಬಂಧ ಸ್ಪರ್ಧೆ ಮತ್ತು ಭಾಷಣ ಸ್ಪರ್ಧೆಗಳನ್ನು ಏರ್ಪಡಿಸಲಾಗಿದ್ದು, ಪ್ರಬಂಧ ಸ್ಪರ್ಧೆಯಲ್ಲಿ 18 (11 ಸ್ವಯಂಸೇವಕಿ/07 ಸ್ವಯಂಸೇವಕ) ಮಂದಿ ಹಾಗೂ ಭಾಷಣ ಸ್ಪರ್ಧೆಯಲ್ಲಿ 13 (6 ಸ್ವಯಂಸೇವಕಿ/07 ಸ್ವಯಂಸೇವಕ) ಮಂದಿ ಭಾಗವಹಿಸಿದ್ದರು.

**The winners of Essay Competition:**

i. Ranjitha H.K : Govt. First Grade College, Mandya
ii. Divyashri E : Vani Vilasa College, Mysuru
iii. Harish M.J : Govt. First Grade College, Mandya

**The winners of Elocution Competition:**

i. Manjunath K.S - Maharaja's College,Mysuru
ii. Shalini Y - Govt.First Grade College-Siddarthanagara, Mysore
iii. Pallavi K.V - Maharani's Arts College, Mysuru

## 10. District level Declamation competition

In association with N.Y.K Mysuru District organized a District level Declamation competition for Students on "**Patriotism and RastraNirmana" on 22-12-2017 at Maharani's Arts College Mysuru. About 40 NSS Volunteers of different college of Mysuru district and Programme Offices** participatedin the Programme

ದಿನಾಂಕ: 22–12–2017 ರಂದು ನೆಹರು ಯುವ ಕೇಂದ್ರ, ಮೈಸೂರು ಮತ್ತು ರಾಷ್ಟ್ರೀಯ ಸೇವಾ ಯೋಜನೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ಇವರ ಸಹಯೋಗದೊಂದಿಗೆ **"ದೇಶ ಪ್ರೇಮ ಹಾಗೂ ರಾಷ್ಟ್ರ ನಿರ್ಮಾಣ"** ಕುರಿತು ಜಿಲ್ಲಾ ಮಟ್ಟದ ಭಾಷಣ ಸ್ಪರ್ಧೆಯನ್ನು ಮಹಾರಾಣಿ ಕಲಾ ಕಾಲೇಜು, ಮೈಸೂರು ಇಲ್ಲಿ ಏರ್ಪಡಿಸಲಾಯಿತು.

## 11. Advisory committee meeting

The University NSS Advisory committee meeting was held under the Chairmanship of Prof. C.Basavaraju Honorable vice-chancellor on 23-12-2017 at A.C Hall, Crawford Hall, Mysuru.

ದಿನಾಂಕ: 23–12–2017 ರಂದು ಅಕಾಡೆಮಿಕ್ ಕೌನ್ಸಿಲ್ ಹಾಲ್, (ಎ.ಸಿ. ಹಾಲ್) ಕ್ರಾರ್ಫಡ್ ಭವನ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇಲ್ಲಿ 2017–18ನೇ ಸಾಲಿನ ಸಲಹಾ ಸಮಿತಿ ಸಭೆಯನ್ನು ಕುಲಪತಿಗಳಾದ ಪ್ರೊ. ಸಿ. ಬಸವರಾಜುರವರ ಅಧ್ಯಕ್ಷತೆಯಲ್ಲಿ ನಡೆಸಲಾಯಿತು.

## Advisory committee meeting






## National Youth week and Award ceremony





## University Level NSS Awards for the year 2016-17

National Youth week and University level U. K. Subbarayachar memorial Award Function was organized on 14-01-2018 at Ranibahaddur Auditorium. Sri Pramod Madvaraj, Honorable Minister for youth Empowerment and Sports, Govt of Karnataka, Bengaluru, and Mata Vivekamayi, Sri Bhavatarini Ashrama, Bengaluru, were the Chief guests, and distributed certificates, Momentous, and Cash prize for the Award winners. Volunteers and officers, Totally 500 Members Participated in the Programme.

ದಿನಾಂಕ: 14–01–2018 ರಂದು ರಾಷ್ಟ್ರೀಯ ಸೇವಾ ಯೋಜನೆ , ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ಇವರ ವತಿಯಿಂದ ರಾಷ್ಟ್ರೀಯ ಯುವ ಸಪ್ತಾಹ ಹಾಗೂ 2016–17ನೇ ಸಾಲಿನ ಎನ್.ಎಸ್.ಎಸ್. ಪ್ರಶಸ್ತಿ ಪ್ರದಾನ ಮತ್ತು ಉ. ಕಾ. ಸುಬ್ಬರಾಯಚಾರ್ ಪ್ರಸಸ್ತಿ ಪ್ರದಾನ ಸಮಾರಂಭವನ್ನು ರಾಣಿಬಹದ್ದೂರ್ ಸಭಾಂಗಣದಲ್ಲಿ ಆಯೋಜಿಸಲಾಗಿತ್ತು. ಈ ಕಾರ್ಯಕ್ರಮಕ್ಕೆ ಶ್ರೀಯುತ. ಪ್ರಮೋದ್ ಮಧ್ವರಾಜ್, ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು, ಕರ್ನಾಟಕ ಸರ್ಕಾರ, ಮಾತಾ ವಿವೇಕಮಯಿ, ಶ್ರೀ ಭವತಾರಿಣಿ ಆಶ್ರಮ, ಬೆಂಗಳೂರು ಇವರುಗಳು ಆಗಮಿಸಿ ವಿವಿಧ ಪ್ರಶಸ್ತಿಗಳನ್ನು ಪಡೆದವರಿಗೆ ಪ್ರಶಸ್ತಿಪತ್ರ, ಸ್ಮರಣಿಕೆ ಹಾಗೂ ನಗದು ಬಹುಮಾನಗಳನ್ನು ವಿತರಿಸಿದರು. ಸುಮಾರು 500 ಮಂದಿ ಭಾಗವಹಿಸಿದ್ದರು.

## University Level NSS Awards for the year 2017

| SL. No. | Best Units | Best Programme Officers |
|---|---|---|
| 1. | Maharani's women's Science College, Mysuru | Ramesh Babu V.R. Maharani's Women's Science College, Mysuru |
| 2. | Govt. First Grade College, Srirangapattana, Mandya. | Ranganatha N.B Govt. First Grade College, Srirangapattana, Mandya. |
| 1 | **Best Male Volunteer :** Manju R.N. , Shanti Arts and Commerce College, Malavalli, Mandya. | |
| 2 | **Best Female Volunteer :** Nishchitha - Govt. First Grade College, K.R.Nagar, Mysuru. | |
| 3 | **U. K. Subbarayachar Memorial Award** 1. Prem Kumar M., Vidyavardhaka College, Mysuru 2. Saraswathi N., Maharaja's College, Mysuru | |

# PERSONALITY DEVELOPMENT AND LIFE SKILL PROGRAMMES:







1. Personality Development and Life skill Programme was Organized by NSS cell of University of Mysore in association with **Govt Science College, Hassan**. From 15-09-2017 and 16-09-2017. 50 Volunteers From different colleges of Hassan district were participated.and K.M Prasanna Kumar, Govt. First Grade College, Siddarthanagara, Mysuru, Dr. Sushi Kadanakuppe, V.S Dental College, and Hospital, Bengaluru, Smitha, J.S.S College, Kollegala, Dr.Lancy D'Souza,Associate Professor, Maharaja's College, Mysuru, also participated in the were resource persons.

ದಿನಾಂಕ: 15–09–2017 ಮತ್ತು 16–09–2017 ರಂದು ರಾಷ್ಟ್ರೀಯ ಸೇವಾ ಯೋಜನೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಮತ್ತು ಸರ್ಕಾರಿ ವಿಜ್ಞಾನ ಕಾಲೇಜು, ಹಾಸನ ಇವರ ಸಹಯೋಗದೊಂದಿಗೆ ಜಿಲ್ಲಾ ಮಟ್ಟದ **"ವ್ಯಕ್ತಿತ್ವ ವಿಕಸನ ಮತ್ತು ಜೀವನ ಕೌಶಲ್ಯ ಕಾರ್ಯಗಾರ"**ವನ್ನು ಹಮ್ಮಿಕೊಂಡಿದ್ದು, ಪ್ರತಿ ರಾಷ್ಟ್ರೀಯ ಸೇವಾ ಯೋಜನೆಯ ಘಟಕಗಳಿಂದ 02 ಮಂದಿ ಸ್ವಯಂ ಸೇವಕರುಗಳ ಒಟ್ಟು 50 ಮಂದಿ ಸ್ವಯಂಸೇವಕರುಗಳು ಭಾಗವಹಿಸಿದ್ದರು. ಈ ಕಾರ್ಯಾಗಾರದ ಸಂಪನ್ಮೂಲ ವ್ಯಕ್ತಿಗಳಾಗಿ ಡಾ. ಲ್ಯಾನ್ಸಿಡಿಸೋಜಾ, ಪ್ರಧ್ಯಾಪಕರು ಮಹಾರಾಜ ಕಾಲೇಜು, ಮೈಸೂರು ಮತ್ತು ಕೆ. ಎಂ ಪ್ರಸನ್ನಕುಮಾರ್, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸಿದ್ದಾರ್ಥನಗರ, ಮೈಸೂರು, ಡಾ. ಸುಶಿ ಕಾಡನಕುಪ್ಪೆ, ವಿ.ಎಸ್ ದಂತ ಕಾಲೇಜು ಮತ್ತು ಹಾಸ್ಪಿಟಲ್, ಬೆಂಗಳೂರು, ಸ್ಮಿತಾ–ಜೆಎಸ್.ಎಸ್ ಕಾಲೇಜು,ಕೊಳ್ಳೇಗಾಲ. ಇವರುಗಳು ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿದ್ದರು.

2. NSS Cell University of Mysore organized personality Development and Life Skill Programme in association with **Maharani's Science College, Mysuru** On 29-12-2017 and 30-12-2017. Volunteers from different colleges of Mysuru and Mandya district are participated K. M Prasanna Kumar, Govt. First Grade College, Siddarthanagara, Mysuru, Dr. Sushi Kadanakuppe, V.S Dental College, and Hospital, Bengaluru, Dr.Lanscy D'Souza, Associate Professor, Maharaja's College, Mysuru, Ms. Indu Thammaih Assistant Professor, J.S.S College of Speech Hearing, Mysuru were the resource person.

ದಿನಾಂಕ: 29–12–2017 ಮತ್ತು 30–12–2017 ರಂದು ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು ಮತ್ತು ರಾಷ್ಟ್ರೀಯ ಸೇವಾ ಯೋಜನೆ ಇವರ ಸಹಯೋಗದೊಂದಿಗೆ ರಾಷ್ಟ್ರೀಯ ಸೇವಾ ಯೋಜನೆ ಸ್ವಯಂಸೇವಕಿಯರಿಗೆ **"ವ್ಯಕ್ತಿತ್ವ ವಿಕಸನ ಮತ್ತು ಜೀವನ ಕೌಶಲ್ಯ"** ತರಬೇತಿಯನ್ನು ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು,ಮೈಸೂರು ಇಲ್ಲಿ ಹಮ್ಮಿಕೊಳ್ಳಲಾಗಿತ್ತು, 100 ಮಂದಿ ಸ್ವಯಂಸೇವಕಿಯರು ಭಾಗವಹಿಸಿದ್ದು, ಸಂಪನ್ಮೂಲ ವ್ಯಕ್ತಿಗಳಾಗಿ ಡಾ.ಸುಶಿ ಕಾಡನಕುಪ್ಪೆ, ವಿ.ಎಸ್ ದಂತ ಕಾಲೇಜು ಮತ್ತು ಹಾಸ್ಪಿಟಲ್, ಬೆಂಗಳೂರು, ಡಾ.ಲ್ಯಾನ್ಸಿ ಡಿಸೋಜಾ– ಮಹಾರಾಜ ಕಾಲೇಜು, ಮೈಸೂರು, ಶ್ರೀಮತಿ. ಇಂದು ತಮ್ಮಯ್ಯ, ಜೆ.ಎಸ್.ಎಸ್ ವಾಕ್ ಮತ್ತು ಶ್ರವಣ ಕಾಲೇಜ್, ಮೈಸೂರು, ಶ್ರೀ.ಕೆ. ಎಂ ಪ್ರಸನ್ನ ಕುಮಾರ್, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸಿದ್ದಾರ್ಥನಗರ, ಇವರುಗಳು ಭಾಗವಹಿಸಿದ್ದರು.

3. In Collaboration with NSS, University of Mysore, and **M.M.K. and Sri.Dharmasthala Manjunatheshwara Women's College, Mysuru** Personality Development, and Life Skill Programme was organized on 18-01-2018 and 19-01-2018, 50 Volunteers from different colleges of Mysuru city were participated. Mr. K. M PrasannaKumar, Govt. First Grade College, Siddarthanagara, Mysuru **(Team Building and Interpersonal Relationship)** Dr. Lanscy D'Souza, Associate Professor, Maharaja's College, Mysuru, **(Empathy and Self Awareness)** Ms. Indu Thimmaih, Assistant Professor,J.S.S. College of Speech and Hearing, Mysuru, **(Effective communication Skill)** Ramesh Babu V. R., Maharani's Women's Science College, Mysuru **(leadership and Personality Development through NSS)** were the resource persons for the workshop.

ದಿನಾಂಕ: 18–01–2018 ಮತ್ತು 19–01–2018 ರಂದು ರಾಷ್ಟ್ರೀಯ ಸೇವಾ ಯೋಜನೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಮತ್ತು

ಎಂ.ಎಂ.ಕೆ ಮತ್ತು ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಮಹಿಳಾ ಮಹಾ ವಿದ್ಯಾಲಯ ಇವರ ಸಹಯೋಗದೊಂದಿಗೆ **"ವ್ಯಕ್ತಿತ್ವ ವಿಕಸನ ಮತ್ತು ಜೀವನ ಕೌಶಲ್ಯ"** ತರಬೇತಿಯನ್ನು ಹಮ್ಮಿಕೊಳ್ಳಲಾಗಿತ್ತು. ಒಟ್ಟು 100 ಮಂದಿ ಸ್ವಯಂಸೇವಕಿಯರು ಭಾಗವಹಿಸಿದ್ದು, ಸಂಪನ್ಮೂಲವ್ಯಕ್ತಿಗಳಾಗಿ ಡಾ.ಲ್ಯಾನ್ಸಿ ಡಿಸೋಜಾ, ಮಹಾರಾಜ ಕಾಲೇಜು, ಮೈಸೂರು (ಎಂಪತಿ ಅಂಡ್ ಸೆಲ್ಫ್ ಅವೇರ್‌ನೆಸ್ ಮತ್ತು ಕೋಪಿಂಗ್ ವಿತ್ ಸ್ಟ್ರೆಸ್ ಅಂಡ್ ಪ್ರಾಬ್ಲಂ ಸಾಲ್ವಿಂಗ್) ಶ್ರೀಮತಿ. ಇಂದು ತಮ್ಮಯ್ಯ, ಜೆ.ಎಸ್.ಎಸ್ ವಾಕ್ ಮತ್ತು ಶ್ರವಣ ಕಾಲೇಜ್, ಮೈಸೂರು (ಎಫೆಕ್ಟಿವ್ ಕಮ್ಯೂನಿಕೇಷನ್ ಸ್ಕಿಲ್ಸ್) ಶ್ರೀ. ಕೆ. ಎಂ ಪ್ರಸನ್ನ ಕುಮಾರ್, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸಿದ್ದಾರ್ಥನಗರ (ಡಿಸಿಷನ್ ಮೇಕಿಂಗ್ ಅಂಡ್ ಪ್ರಾಬ್ಲಂ ಸಾಲ್ವಿಂಗ್, ಮತ್ತು ಟೀಂ ಬಿಲ್ಡಿಂಗ್ ಅಂಡ್ ಇಂಟರ್ ಪರ್‌ಸನ್ ರಿಲೇಷನ್‌ಶೀಪ್) ಶ್ರೀ ರಮೇಶ್ ಬಾಬು ವಿ.ಆರ್– ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು, ಮೈಸೂರು (ರಾ.ಸೇ.ಯೋಜನೆಯಿಂದ ನಾಯಕತ್ವ ಮತ್ತು ವ್ಯಕ್ತಿತ್ವ–ವಿಕಸನ) ಇವರು ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿದ್ದರು.

## Life Skill development training Programme:
## ನಿಮ್ಹಾನ್ಸ್‌ನಲ್ಲಿ ಆಯೋಜನೆಗೊಂಡ ಜೀವನ ಕೌಶಲ್ಯ ತರಬೇತಿ ಕಾರ್ಯಕ್ರಮಗಳು

1. Life Skill Development Training Programme was Organized by NIMHANS' Bengaluru from 31-01-2017 to 04-02-2017. 05 Programme officers of University of Mysuru participated in the Programme.
ದಿನಾಂಕ: 31–01–2017 ರಿಂದ 04–02–2017ರವರೆಗೆ, ಜೀವನ ಕೌಶಲ್ಯ ತರಬೇತಿಯನ್ನು ನಿಮ್ಹಾನ್ಸ್, ಬೆಂಗಳೂರು ಇಲ್ಲಿ ಆಯೋಜಿಸಿದ್ದು ರಾಷ್ಟ್ರೀಯ ಸೇವಾ ಯೋಜನೆ, ಮೈಸೂರು ವಿಶ್ವವಿದ್ಯಾನಿಲಯ ವತಿಯಿಂದ 05 ಮಂದಿ ಕಾರ್ಯಕ್ರಮಾಧಿಕಾರಿಗಳು ಭಾಗವಹಿಸಿದ್ದರು.

2. Life Skill Development Training Programme was Organized by NIMHANS' Bengaluru from 17-04-2017 to 22-04-2017. 05 Programme officers of University of Mysuru participated in the Programme.
